ದಿನಾಂಕಃ 16.04.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀಸವಾಲುಃ ನಿಯೋಜಿತ ಪ್ರತಿವಾದಿ ನಂಬರ 2(ಎ) ಮತ್ತು 2( ಬಿ) ಪರ ಶ್ರೀ. ಎಸ್. ವಿ. ಕೆ ವಕೀಲರಿಂದಃ**

1 ನೇ ಪ್ರತಿವಾದಿ ಹಾಗೂ 2ನೇ ಪ್ರತಿವಾದಿ ಬೇರೆ ಬೇರೆ ಪಡಿತರ ಚೀಟಿಯನ್ನು ಹೊಂದಿರುತ್ತಾರೆಂದರೆ ನಿಜ. ಅದೇ ರೀತಿ ವಾದಿಯು ಸಹ ಪ್ರತ್ಯೇಕವಾಗಿ ಪಡಿತರ ಚೀಟಿಯನ್ನು ಹೊಂದಿರುತ್ತಾರೆಂದರೆ ನಿಜ. ಪಡಿತರ ಚೀಟಿಯಲ್ಲಿ ಕುಟುಂಬದ ಸದಸ್ಯರ ಹೆಸರುಗಳು ಇರುತ್ತವೆ ಎಂದರೆ ನಿಜ. ನನ್ನ ತಂದೆ ತಾಯಿ, ನಾನು ಮತ್ತು ನನ್ನ ಸಹೋದರ ಸಹೋದರಿಯರು ಸೇರಿ ಒಂದೇ ಪಡಿತರ ಚೀಟಿಯನ್ನು ಹೊಂದಿರುತ್ತೇವೆ ಎಂದರೆ ನಿಜ. ಸಾಕ್ಷಿ ಮುಂದುವರೆದು ನನ್ನ ತಂದೆಯ ಪಡಿತರ ಚೀಟಿಯಲ್ಲಿ ನನ್ನ ಹೆಸರು ಇರುವುದಿಲ್ಲ. ಅದೇ ರೀತಿ ನನ್ನ ಸಹೋದರಿಯರು ಮದುವೆ ಮಾಡಿಕೊಂಡು ಹೋಗಿದ್ದು, ಅವರ ಹೆಸರುಗಳು ಸಹ ಪಡಿತರ ಚೀಟಿಯಲ್ಲಿ ಇರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಸರಕಾರಿ ಸೇವೆ ಸೇರಿದ ನಂತರ ನನ್ನ ಹೆಸರು ಪಡಿತರ ಚೀಟಿಯಲ್ಲಿ ಕಡಿಮೆಯಾಗಿದ್ದು, ಅದೇ ರೀತಿ ನನ್ನ ಸಹೋದರಿಯರು ಮದುವೆ ಮಾಡಿಕೊಂಡು ಹೋಗಿದಾಗಿನಿಂದ ಅವರ ಹೆಸರುಗಳು ಸಹ ಪಡಿತರ ಚೀಟಿಯಲ್ಲಿ ಕಡಿಮೆಯಾಗಿರುತ್ತವೆ. ಸನ್ 2017 ರ ನಂತರ ನನ್ನ ಹೆಸರು ಕಡಿಮೆಯಾಗಿರುತ್ತದೆಂದರೆ ನಿಜ.

ನನ್ನ ದೊಡ್ಡಪ್ಪನಾದ 3 ನೇ ಪ್ರತಿವಾದಿಗೆ ಇಬ್ಬರು ಗಂಡು ಮಕ್ಕಳು ಇರುತ್ತಾರೆ. ಅವರಿಬ್ಬರೂ ಮದುವೆ ಮಾಡಿಕೊಂಡು ಬೇರೆ ಬೇರೆ ಮನೆಯಲ್ಲಿ ವಾಸವಾಗಿರುತ್ತಾರೆ. 3 ನೇ ಪ್ರತಿವಾದಿ ಪಿ.ಕೆ.ಪಿ. ಎಸ್ ಬ್ಯಾಂಕ, ಖನಗಾಂವದಲ್ಲಿ ನೌಕರಿ ಮಾಡಿ ಈಗ ಸುಮಾರು 4-5 ವರ್ಷಗಳ ಹಿಂದೆ ನಿವೃತ್ತಿ ಹೊಂದಿರುತ್ತಾರೆ. ನನ್ನ ತಂದೆ ಅಂದರೆ ವಾದಿಯು ಒಕ್ಕಲುತನ ಮಾಡುತ್ತಾರೆ. ಅವರು ದಾವಾ ಆಸ್ತಿಗಳ ಜಮೀನುಗಳಲ್ಲಿ ಒಕ್ಕಲುತನ ಮಾಡುತ್ತಾರೆ. ದಾವಾ ಜಮೀನುಗಳಲ್ಲಿ ಗೋವಿನ ಜೋಳ, ಕಬ್ಬು

ಬೆಳೆಯನ್ನು ಬೆಳೆಯುತ್ತಾರೆ. ಸನ್ 2011 ಮತ್ತು ಸನ್ 2012 ರಲ್ಲಿ 02 ವರ್ಷಗಳ ಕಾಲ ಕಬ್ಬನ್ನು ಬೆಳೆದಿದ್ದು, ನಂತರದಲ್ಲಿ ಗೋವಿನ ಜೋಳ ಬೆಳೆ ಬೆಳೆಯುತ್ತಿದ್ದಾರೆ. ದಾವಾ ಜಮೀನುಗಳಲ್ಲಿ ಬೆಳೆದ ಉತ್ಪನ್ನವನ್ನು ವಾದಿ, 1 ರಿಂದ 3 ನೇಪ್ರತಿವಾದಿಯರು ಎಲ್ಲರೂ ಹಂಚಿಕೊಳ್ಳುತ್ತಿದ್ದರು. ಅಂದಾಜು ಎಷ್ಟು ಉತ್ಪನ್ನ ಬರುತ್ತಿತ್ತು ಎಂದು ನನಗೆ ಹೇಳಲು ಆಗುವುದಿಲ್ಲ.

ನನ್ನ ತಂದೆಗೆ ನಾನೊಬ್ಬನೇ ಮಗ ಇರುವುದರಿಂದ ಕುಟುಂಬದಲ್ಲಿ ಯಾವುದೇ ಮಹತ್ವದ ನಿರ್ಧಾರವನ್ನು ತೆಗೆದುಕೊಳ್ಳಬೇಕಾದರೆ ಎಲ್ಲರೂ ಸೇರಿಯೇ ಚರ್ಚೆ ಮಾಡಿ ನಿರ್ಧಾರ ತೆಗೆದುಕೊಳ್ಳುತ್ತಿದ್ದೇವು ಎಂದರೆ ಸಾಕ್ಷಿಯು ನನ್ನ ತಂದೆಯವರು ಕುಟುಂಬದ ಹಿರಿಯವರಾಗಿದ್ದರಿಂದ ಮಹತ್ವದ ನಿರ್ಧಾರವನ್ನು ತೆಗೆದುಕೊಳ್ಳುತ್ತಿದ್ದರು ಎಂದು ನುಡಿಯುತ್ತಾರೆ.

3 ನೇ ಪ್ರತಿವಾದಿಯರ ಮಕ್ಕಳ ಸಂಬಂಧವು 1 ಮತ್ತು 2 ನೇ ಪ್ರತಿವಾದಿಯರ ಜೊತೆಗೆ ಹೇಗೆ ಇತ್ತು? ಎನ್ನುವ ಪ್ರಶ್ನೆಗೆ ಸಾಕ್ಷಿಯು ಅವರು 1 ಮತ್ತು 2 ನೇ ಪ್ರತಿವಾದಿಯರನ್ನು ನೋಡಲು ಬರುತ್ತಿರಲಿಲ್ಲ ಹಾಗೂ ಅವರ ಜೊತೆ ಒಳ್ಳೆಯ ಸಂಬಂಧ ಹೊಂದಿರಲಿಲ್ಲ ಎಂದು ನುಡಿಯುತ್ತಾರೆ. ಯಾವ ಕಾರಣಕ್ಕಾಗಿ ಅವರ ಸಂಬಂಧ ಸರಿ ಇರಲಿಲ್ಲ ಎಂದರೆ ಸಾಕ್ಷಿಯು ನಿಖರವಾಗಿ ಹೇಳಲು ಆಗುವುದಿಲ್ಲ ಎಂದು ನುಡಿಯುತ್ತಾರೆ. ಪ್ರಸ್ತುತ ನನ್ನ ತಂದೆ ತಾಯಿ ತೋಟದ ಮನೆಯಲ್ಲಿ ಸುಮಾರು 10 ರಿಂದ 15 ವರ್ಷಗಳಿಂದ ವಾಸವಾಗಿದ್ದಾರೆ.

1 ಮತ್ತು 2 ನೇ ಪ್ರತಿವಾದಿಯರ ಆರೋಗ್ಯವನ್ನು ನೋಡಿಕೊಳ್ಳುವುದು ಹಾಗೂ ಅವರಿಗೆ ಹಣಕಾಸಿನ ಸಹಾಯವನ್ನು ಮಾಡುವುದನ್ನು ನಾನೇ ಮಾಡುತ್ತಿದ್ದೆ. ನನ್ನ ತಂದೆಗೆ ಸಾಕಷ್ಟು ಆದಾಯ ಇರದೇ ಇದ್ದುದರಿಂದ ನನ್ನ ಶಿಕ್ಷಣದ ಖರ್ಚನ್ನು ಭರಿಸಲು ಆಗುತ್ತಿರಲಿಲ್ಲ, ಸದರಿ ಖರ್ಚನ್ನು ನನ್ನ ಸೋದರತ್ತೆಯಾದ 2 ನೇ ಪ್ರತಿವಾದಿ ನೋಡಿಕೊಳ್ಳುತ್ತಿದ್ದಳು ಎಂದರೆ ಸರಿಯಲ್ಲ. ನಾನು 1 ಮತ್ತು 2 ನೇ ಪ್ರತಿವಾದಿಯರ

ಪಾಲನೆ-ಪೋಷಣೆ ಮಾಡಿರುತ್ತೇನೆಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ನಿಜ. 3 ನೇ ಪ್ರತಿವಾದಿಯ ಮಕ್ಕಳು ಮದುವೆಯಾದ ನಂತರ ತಮ್ಮ ತಮ್ಮ ಹೆಂಡಂದಿರೊಂದಿಗೆ ಬೇರೆ ಬೇರೆ ಮನೆ ಮಾಡಿಕೊಂಡು ಪ್ರತ್ಯೇಕವಾಗಿ ವಾಸವಾಗಿರುವ ಸಂಗತಿಯನ್ನು ಅರ್ಜಿ ಸಲ್ಲಿಸುವ ಕಾಲಕ್ಕೆ ನಮ್ಮ ವಕೀಲರಿಗೆ ಮಾಹಿತಿಯನ್ನು ನೀಡಿರುತ್ತೇನೆ.

ನನ್ನ ಜನ್ಮ ದಿನಾಂಕ 19.07.1996 ಇರುತ್ತದೆ. 2 ನೇ ಪ್ರತಿವಾದಿಯ ಗಂಡ ಶಿವಪ್ಪನು ಸನ್ 1993 ರಲ್ಲಿ ಮೃತಪಟ್ಟಿರಬಹುದು ಆದರೆ ನನಗೆ ನಿಖರವಾದ ದಿನಾಂಕ ಹೇಳಲು ಆಗುವುದಿಲ್ಲ. ಸದರಿ ಶಿವಪ್ಪನು ದುಶ್ಚಟಗಳಿಗೆ ಬಲಿಯಾಗಿ ಮೃತಪಟ್ಟಿರುತ್ತಾನೆಂಬ ಸಂಗತಿಯು ನನ್ನ ತಂದೆ ಹಾಗೂ 2 ನೇ ಪ್ರತಿವಾದಿಯಿಂದ ಕೇಳಿ ತಿಳಿದುಕೊಂಡಿರುತ್ತೇನೆ. ಸದರಿ ಶಿವಪ್ಪ ತೀರಿಕೊಂಡಾಗ ಆತನ ಮಕ್ಕಳ ವಯಸ್ಸು ಎಷ್ಟು ಇತ್ತು ಎಂದು ನನಗೆ ಹೇಳಲು ಆಗುವುದಿಲ್ಲ. ನನ್ನ ಮುಖ್ಯ ವಿಚಾರಣೆಯ ಖಂಡಿಕೆ 3 ರಲ್ಲಿರುವ ಸಂಗತಿಗಳನ್ನು ಯಾವ ಆಧಾರದ ಮೇಲೆ ಹೇಳಿ ಬರೆಸಿರುತ್ತೀರಿ? ಎಂದರೆ ಸಾಕ್ಷಿಯು ಪ್ರಸ್ತುತ 2 ನೇ ಪ್ರತಿವಾದಿಯ ಮಕ್ಕಳು ಬಾಳೇಕುಂದ್ರಿಯಲ್ಲಿ ಇರುವ ಬಗ್ಗೆ ಬರೆಸಿರುತ್ತೇನೆಂದು ನುಡಿಯುತ್ತಾರೆ. 2 ನೇ ಪ್ರತಿವಾದಿಯ ಮಕ್ಕಳು ಅವಳಿಂದ ಬೇರ್ಪಟ್ಟು ತಮ್ಮ ತಮ್ಮ ಹೆಂಡತಿ ಮಕ್ಕಳೊಂದಿಗೆ ಪ್ರತ್ಯೇಕವಾಗಿ ವಾಸಿಸುತ್ತಿದ್ದಾರೆಂದು ಸುಳ್ಳು ನುಡಿಯುತ್ತಿದ್ದು, ಆ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯು ನಮ್ಮ ಕುಟುಂಬದೊಂದಿಗೆ ವಿ. ಪಿ. ಸಿ ನಂಬರ 254 ರಲ್ಲಿ ವಾಸವಾಗಿದ್ದಳು ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವಶ್ಯವೆನಿಸಿದರೆ ದಾಖಲೆಯನ್ನು ಹಾಜರುಪಡಿಸುತ್ತೇನೆಂದು ನುಡಿಯುತ್ತಾರೆ. 1 ಮತ್ತು 2 ನೇ ಪ್ರತಿವಾದಿಯರು ದೇವನಗೌಡನಹಟ್ಟಿ ಗ್ರಾಮದ ವಿ. ಪಿ. ಸಿ ನಂಬರ

264-ಬ ಮನೆಯಲ್ಲಿ ವಾಸವಾಗಿದ್ದರು ಎಂದರೆ ಸರಿಯಲ್ಲ. ಸದರೀಯವರ ರಹವಾಸಿ ದಾಖಲೆಗಳಲ್ಲಿ ವಿ. ಪಿ. ಸಿ ನಂಬರ 264-ಬ ಎಂದು ಇರುತ್ತವೆ ಎಂದರೆ ಸರಿಯಲ್ಲ.

ಸನ್ 2017 ರವರೆಗೆ ನಾನು 1 ಮತ್ತು 2 ನೇಪ್ರತಿವಾದಿಯರ ಜೊತೆ ವಾಸವಾಗಿದ್ದು, ನೌಕರಿಗೆ ಸೇರಿದ ನಂತರ ನಾನು ದೇವನಗೌಡನಹಟ್ಟಿ ಗ್ರಾಮಕ್ಕೆ 1 ಮತ್ತು 2 ನೇ ಪ್ರತಿವಾದಿಯರನ್ನು ನೋಡಿಕೊಳ್ಳಲು ಹೋಗಿ ಬಂದು ಮಾಡುತ್ತಿದ್ದೇನೆಂಬ ಸಂಗತಿಯನ್ನು ಪ್ರಸ್ತುತ ಅರ್ಜಿ ನೀಡುವ ಕಾಲಕ್ಕೆ ವಕೀಲರಿಗೆ ಮಾಹಿತಿ ನೀಡಿರುತ್ತೇನೆ. ಸಾಕ್ಷಿ ಮುಂದುವರೆದು ಮುಂಚೆ ಹೋಗಿ ಬಂದು ಮಾಡುತ್ತಿದ್ದೆ, ನಾನು ಬೆಳಗಾವಿಗೆ ವರ್ಗಾವಣೆಯಾಗಿ ಬಂದ ನಂತರ ದೇವನಗೌಡನಹಟ್ಟಿ ಗ್ರಾಮದಿಂದ ಓಡಾಡಿಕೊಂಡು ಇದ್ದೆನು ಎಂದು ನುಡಿಯುತ್ತಾರೆ.

ನಾನು ಪೊಲೀಸ್ ಇಲಾಖೆಯಲ್ಲಿ ತುರ್ತು ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆಂದರೆ ನಿಜ. ಆದ್ದರಿಂದ ಸದರಿ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುವವರು ಮುಖ್ಯ ಕಚೇರಿಯನ್ನು ಬಿಟ್ಟು ಬೇರೆ ಕಡೆ ವಾಸಿಸಲು ಬರುವುದಿಲ್ಲ ಎಂದರೆ ನಿಜ. ಸಾಕ್ಷಿ ಮುಂದುವರೆದು ರಜೆ ಸಮಯದಲ್ಲಿ ಮೇಲಾಧಿಕಾರಿಗಳ ಅನುಮತಿಯೊಂದಿಗೆ ದೇವನಗೌಡನಹಟ್ಟಿ ಗ್ರಾಮಕ್ಕೆ ಹೋಗಿ ಬಂದು ಮಾಡುತ್ತಿದ್ದೆ ಎಂದು ನುಡಿಯತ್ತಾರೆ. ನಾನು ದೇವನಗೌಡನಹಟ್ಟಿ ಗ್ರಾಮಕ್ಕೆ 1 ಮತ್ತು 2 ನೇ ಪ್ರತಿವಾದಿಯನ್ನು ನೋಡಿಕೊಂಡು ಹೋಗಲು ಹೋಗಿ ಬಂದು ಮಾಡುತ್ತಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಸದರಿ ಪ್ರಕರಣವನ್ನು ನನ್ನ ತಂದೆ ಸನ್ 2018 ರಲ್ಲಿ ದಾಖಲಿಸಿದ್ದಾರೆ. ಸದರಿ ಸಂಗತಿಯನ್ನು ನನ್ನ ತಂದೆ ನನಗೆ ತಿಳಿಸಿದ್ದರು. ಸದರಿ ಸಂಗತಿಯು 1 ಮತ್ತು 2 ನೇ ಪ್ರತಿವಾದಿಯರಿಗೆ ನೋಟೀಸು ಜಾರಿಯಾದ ನಂತರ ಅವರಿಗೆ ಗೊತ್ತಾಗಿರುತ್ತದೆಂದು ನನ್ನ ತಂದೆ ನನಗೆ ಹೇಳಿರುತ್ತಾರೆ. ನಮ್ಮ ಸಂಬಂಧಿಕರಾ ಸಿದ್ಧಣಗೌಡಾ

ಪಾಟೀಲರವರು 1 ಮತ್ತು 2 ನೇ ಪ್ರತಿವಾದಿಯರನ್ನು ನೋಟೀಸು ಜಾರಿಯಾದ ನಂತರ ವಕೀಲರಿಗೆ ಭೇಟ್ಟಿಯಾಗಿ ಚರ್ಚೆ ಮಾಡಿರುತ್ತಾರೆ. ಸದರಿ ಸಿದ್ಧಣಗೌಡಾ ಪಾಟೀಲರವರ ಹೆಸರನ್ನು ನನ್ನ ಮುಖ್ಯ ಅರ್ಜಿಯಲ್ಲಿ ಹೇಳಲು ತೊಂದರೆ ಇರಲಿಲ್ಲ. ಸದರಿ ಪ್ರಕರಣದ ನೋಟೀಸು 1 ಮತ್ತು 2 ನೇ ಪ್ರತಿವಾದಿಯರಿಗೆ ಜಾರಿಯಾದ ಸಂಗತಿಯನ್ನು ನಾನು ರಜೆಗೆ ಊರಿಗೆ ಬಂದಾಗ ಅವರು ತಿಳಿಸಿರುತ್ತಾರೆ. 2ನೇ ಪ್ರತಿವಾದಿಯ ಬಳಿ ನನ್ನ ಮೊಬೈಲ್ ನಂಬರ ಇತ್ತು. ನೋಟೀಸು ಬಂದ ಸಂಗತಿಯನ್ನು ಪೋನ್ ಮಾಡಿ ಏಕೆ ತಿಳಿಸಲಿಲ್ಲ ಎಂದು 2ನೇ ಪ್ರತಿವಾದಿಯನ್ನು ವಿಚಾರಿಸಿರುತ್ತೀರಾ? ಎಂದರೆ ಸಾಕ್ಷಿಯು ಅವರು ಮೊಬೈಲ್ ಬಳಸುತ್ತಿರಲಿಲ್ಲ ಎಂದು ನುಡಿಯುತ್ತಾರೆ. 1 ಮತ್ತು 2 ನೇ ಪ್ರತಿವಾದಿಯರು ನನ್ನನ್ನು ಮೊಬೈಲ್ ಪೋನ ಮೂಲಕ ಸಂಪರ್ಕಿಸುವ ಯಾವುದೇ ಸಂದರ್ಭ ಉಂಟಾಗಿರಲಿಲ್ಲ. ಸಾಕ್ಷಿ ಮುಂದುವರೆದು ನನ್ನ ತಂದೆ ಯಾವಾಗಾಲಾದರೊಮ್ಮೆ ಪೋನ್ ಮಾಡಿದಾಗ ಅವರು ಸಹ ಮಾತನಾಡುತ್ತಿದ್ದರು. ನನ್ನ ತಂದೆ ಪ್ರಸ್ತುತ ಪ್ರಕರಣವನ್ನು ದಾಖಲು ಮಾಡಿದ ನಂತರವೂ ಸಹ 1 ಮತ್ತು 2 ನೇ ಪ್ರತಿವಾದಿಯರೊಂದಿಗೆ ಒಳ್ಳೆಯ ಸಂಬಂಧ ಹೊಂದಿದ್ದರು. ಪ್ರಸ್ತುತ ಪ್ರಕರಣವನ್ನು ದಾಖಲು ಮಾಡಿದ ಸಂಗತಿ 1 ಮತ್ತು 2 ನೇ ಪ್ರತಿವಾದಿಯರಿಗೆ ಯಾವ ಕಾಲಕ್ಕೂ ಗೊತ್ತಿರಲಿಲ್ಲ ಎಂದರೆ ಸರಿಯಲ್ಲ. ನೋಟೀಸು ಜಾರಿಯಾದ ನಂತರ 1 ಮತ್ತು 2 ನೇ ಪ್ರತಿವಾದಿಯರು ನಮ್ಮ ಸಂಬಂಧಿಕರೊಂದಿಗೆ ವಕೀಲರನ್ನು ಸಂಪರ್ಕಿಸಿರುತ್ತಾರೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸನ್ 2025 ಜುಲೈ ತಿಂಗಳಿನಲ್ಲಿ ಊರಲ್ಲಿ ಹಿರಿಯರು ಕೂಡಿದ್ದರು. ಹಿರಿಯರಾದ ಮಲ್ಲಪ್ಪ ಬಸಲಿಂಗಪ್ಪ ವಣ್ಣೂರ, ಹಾಲಪ್ಪಾ ಅಪ್ಪಯ್ಯಪ್ಪಾ ವಣ್ಣೂರ, ಈರಣ್ಣ ಬಸಲಿಂಗಪ್ಪ ವಣ್ಣೂರ, 2 ನೇ ಪ್ರತಿವಾದಿಯ ಮಕ್ಕಳು, ವಾದಿ , 3 ನೇ ಪ್ರತಿವಾದಿ, ಸಿಧಲಿಂಗಪ್ಪ ಕೊಳದೂರ ಎಲ್ಲರೂ ಸೇರಿದ್ದರು.

ಸದರೀಯವರ ಹೆಸರುಗಳನ್ನು ಮುಖ್ಯ ಅರ್ಜಿಯಲ್ಲಿ ಹೇಳಿರುವುದಿಲ್ಲ ಎಂದರೆ ನಿಜ. ಸದರಿ ಸಿಥಲಿಂಗಪ್ಪ ಕೊಳದೂರವರು 1 ನೇ ಪ್ರತಿವಾದಿಯ ಕಡೆಯ ಸಂಬಂಧಿಕರು ಇದ್ದು, ಅವರು ಮೂಲತಃ ಕೊಳವಿ ಗ್ರಾಮದವರಾಗಿದ್ದು ಪ್ರಸ್ತುತ ಹೂಲಿಕಟ್ಟಿ ಗ್ರಾಮದಲ್ಲಿ ವಾಸವಾಗಿರುತ್ತಾರೆ. ಸಾಕ್ಷಿ ಮುಂದುವರೆದು ನನ್ನ ತಾಯಿಯ ಅಕ್ಕನ ಮಗನಿಗೆ ಸದರೀಯವರ ಮಗಳನ್ನು ಮದುವೆ ಮಾಡಿಕೊಂಡಿರುತ್ತಾರೆಂದು ನುಡಿಯುತ್ತಾರೆ. ಸದರಿ ಸಿಥಲಿಂಗಪ್ಪ ಕೊಳದೂರ ಇವರು 2 ನೇ ಪ್ರತಿವಾದಿಯ ದೂರದ ಸಂಬಂಧಿ ಎಂದರೆ ನಿಜ.

**ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಸಮಯ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ ರೀತಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

(ಮಹಾದೇವ ಕಾನಟ್ಟಿ)
1ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ